ಎಸ್. ರಶ್ಮಿ



# ಬೀದರ್ ಭಾಷಾ ಸೊಬಗು

ಕಾನ್ನಡಿ ಮಾತಾಡ್ತಾಳ... ಪೋರಿ. ಮರಾಠಿ ಬರಲ್ಲ, ತೆಲುಗು ಬರಲ್ಲ... ಯಾನಿಲ್ಲ... ಹಿಂದಿಭಿ ಬರ್ತದೊ ಇಲ್ಲೊ... ಖಾಲಿ ಕಾನ್ನಡಿ ಮಾತಾಡ್ದುರ ಹೆಂಗ? ಕಕ್ಕಾಬಿಕ್ಕಿಯಾಗಿ ಅವರನ್ನೇ ನೋಡ್ತಿದ್ದೆ. ಅವರೂ ನಂಗ ಹಂಗೇ ನೋಡ್ತಿದ್ರು. ಎಲ್ಲದಕ್ಕೂ 'ಭಿ' ಹಚ್ಚುವ ಕ್ರಮ ಬೀದರ್ ಭಾಷೆಯದು. ನಾ ಯಾನ್‌ಭಿ ಮಾಡಿಲ್ಲ (ನಾ ಏನೂ ಮಾಡಿಲ್ಲ) ನಾಬಿ ಬರ್ತೆ (ನಾನೂ ಬರ್ತೀನಿ) ಮಾಡಿದ್ರುಬಿ (ಮಾಡಿದ್ರೂ) ಹೀಗೆ ಪ್ರತಿ ಪದದ ಹಿಂದ ಏನರೆ ಒತ್ತಿ ಹೇಳಬೇಕಿದ್ರ ಈ ಭಿ ಬಂದೇ ಬಿಡ್ತಿತ್ತು. ಭಿ, ಅಥವಾ ಬಿ ಬಹುಶಃ ಇಂಗ್ಲಿಷ್‌ನ **be** ಯ ಪ್ರಭಾವ ಇತ್ತಾ? ಗೊತ್ತಿಲ್ಲ ನಂಗವಾಗ ಅಷ್ಟೆಲ್ಲ ಭಾಷಾ ಜ್ಞಾನ ಇರಲಿಲ್ಲ.

ಭಾಷಾ ಅನ್ನೊತ್ಲೆ ನೆನಪಾತು ನೋಡ್ರಿ... ಅಲ್ಲೆಲ್ಲ 'ಏನ್‌ಗೆ ಬಾಷಾ' ಅನ್ನೋರು. ಅಗ್ದಿ ಸಲಗಿಲೆ ಸ್ನೇಹಿತನ ಮಾತನಾಡಿಸುವ ಪರಿ ಅದು. ಏನಪ್ಪಾ ದೊರೆ ಅಂದ್ಹಂಗ ಏನಲೆ ರಾಜಾ ಅಂದ್ಹಂಗ ಬಾದ್‌ಶಾ ಶಬ್ದದ ಅಪಭ್ರಂಶ ಅದು. ಇಕಿನೆ, ಅಕಿನೆ ಅನ್ನೂದು ಭಾಳ ಸಹಜಗೆ ಕಲ್ತಿದ್ದೆ. ಇಕೀನ ಅನ್ನೂದ್ರ ಬದಲು, ಇಕಿನೆ ಅಂತ ಕರಿಯೂದು ನಮ್ಮಪ್ಪಗ ಭಾಳ ಸೇರಿತ್ತು. ನನ್ನ ಮಾತು ಕೇಳಿ ಕೇಳಿ ನಮ್ಮಪ್ಪನು ನಮ್ಮಮ್ಮಗ ಏ ಇಕೀನೆ ಅಂತ ಕರೀತಿದ್ರು.

ನಮ್ಮನಿಗೆ ರತ್ನಮ್ಮ ಅಂತ ಕೆಲಸದಾಗಿ ಬರ್ತಿದ್ಲು. ಅಕಿ ಯವಾಗಲೂ 'ಹೊತ್ರಾಳಿ ಹೊಂಟಿದೆ' ಅಂತಿದ್ಲು. ಅದನ್ನ ಮಾತ್ರ ತಿಪ್ಪರಲಾಗಾ ಹಾಕಿದ್ರೂ ತಿಳೀತಿರಲಿಲ್ಲ. ಬರೂದಕ್ಕ ಹೊಂಟಿದೆ ಅನ್ನಾಕಿ ನಮ್ಮ ರತ್ನವ್ವ. ಮಂಜಮುಂಜೇನಿ ಅಂತೀವಲ್ಲ ಆ ಹೊತ್ತಿಗೆ ಹೊತ್ತು ಅರಳಿದಾಗ ಅಂತ ಅಂತಾರಲ್ಲಿ. ಮುಸ್ಸಂಜಿಗೆ ಗೋದೂಳಿ ಸಮಯ ಅಂದ್ಹಂಗ. ಈ ಹೊತ್ತರಳುವ ಸಮಯ ಹೊತ್ರಾಳಿ ಆಗೈತಿ ನೋಡ್ರಿ. ಹಂಗ ಹೊತ್ತರಳಿದಾಗ ಸಮರ ವಿಮಾನಗಳು ಭರ್ ಅಂತ ನಭ ಸೀಳಿ ಹೋಗ್ತಾವ. ಅಬ್ಬಾ ಎಂಥಾ ವಿಮಾನ ಅವು... ರೆಕ್ಕಿ ಅಗಲಿಸಿ ನಮ್ಮ ತಲೀಮ್ಯಾಲಿಂದ ಹೋದ್ರ, ಹೊಕ್ಕಳದಾಳಕ್ಕೂ ವಿಮಾನಿನ ಸಪ್ಪಳ ಇಳದು ಹೋಗ್ತಿತ್ತು. ಅಕೋ... ಗುಬಾರ ಬಂದು. ಮಾತಾಡಿಂದೆ ಕೇಳಲ್ಲ... ಅಂದ್ರ ವಿಮಾನ ಹಾರೂಮುಂದ ಮಾತಾಡೂದು ಕೇಳೂದಿಲ್ಲ ಅಂತ. ಹಿಂದಿಯ ಗುಬ್ಬಾರೆ ಪದ ಬಲೂನು ಅಂತ ಅರ್ಥ. ಅದೇ ಇಲ್ಲಿ ವಿಮಾನಕ್ಕೂ ಬಳಕಿಯೊಳಗದ.